ತನ್ನನ್ನು ಬಿಟ್ಟು ಇನ್ಯಾರಿಗೂ ಹೋಗಬಾರದಿತ್ತು. ಸಾಂತಾಕ್ರೂಝಿನ ತಮ್ಮ ನೆರೆಹೊರೆಯವರಲ್ಲಿ ಈ ಘಟನೆ ಎಡೆಮಾಡಿಕೊಟ್ಟ ಊಹಾಪೋಹಕ್ಕೆ ಬೇಸತ್ತೇ ಈ ಹೊಸ ಜನವಸತಿಗೆ ಬಂದ ಮಕ್ಕಳಿಗೆ ಇಲ್ಲಿ ಬಂದು ಎರಡು ವಾರಗಳಾಗುವ ಮೊದಲೇ ಇದಿರಾದ ಸನ್ನಿವೇಶ ಕಂಗೆಡಿಸುವಂಥದ್ದು. ಆದರೆ ಆ ಕಂಗೇಡಿತನ ಹಿಂದಿನ ಗುಟ್ಟನ್ನು ತಾನು ಹಾಳು ಮಾಡಬಾರದಿತ್ತು. ತುಟಿಮೀರಿದ ತಪ್ಪನ್ನು ಸರಿಪಡಿಸುವ ದಾರಿ ಜಾಧವನಿಗೆ ತಕ್ಷಣ ಹೊಳೆಯಿಲಿಲ್ಲ. 'ಈಗ ಹೇಳಿದ್ದು ನಿಮ್ಮ ನಿಮ್ಮಲೇ ಇರಲಿ. ನನ್ನನ್ನು ಬಿಟ್ಟು ಇದನ್ನವರು ಇನ್ನಾರಿಗೂ ಹೇಳಿದಂತಿಲ್ಲ', ಎಂದು ಹೇಳಬೇಕೆಂದುಕೊಂಡದ್ದು ಹಾಸ್ಯಾಸ್ಪದವಾಗಿ ತೋರಿತು. ಯಾಕೆಂದರೆ ರಾವ್‌ಜೀಭಾಯಿಯ ಮಕ್ಕಳು ತನ್ನಲ್ಲಿ ಮಾಡಿದ ಇಂತಹದೇ ಪ್ರಾರ್ಥನೆಯನ್ನು ತಾನೇ ಪಾಲಿಸಿರಲಿಲ್ಲ! ಮುದುಕ–ಮುದುಕಿ ತನ್ನ ಮಾತಿನ ಹಾದಿಯನ್ನೇ ಕಾಯುತ್ತಿದ್ದವರ ಹಾಗೆ ತನ್ನತ್ತ ನೋಡುತ್ತಿದ್ದಾಗ ಹೊಳೆದ ಒಂದೇ ಒಂದು ಉಪಾಯವೆಂದರೆ ರಾವ್‌ಜೀಭಾಯಿಯ ಮಕ್ಕಳನ್ನು ಕುರಿತು ಅವರಲ್ಲಿ ಉಂಟಾದ ತಪ್ಪು ಕಲ್ಪನೆಯನ್ನು ಸರಿಪಡಿಸುವುದು:

''ಮಕ್ಕಳು ಏನು ಮಾಡುತ್ತಾರೆ. ಪಾಪ! ಅಪ್ಪನೆಂದರೆ ಜೀವವೋ ಪ್ರಾಣವೋ! ಅಪ್ಪನಿಗೆ ಕಣ್ಣ ಮುಂದೆ ಇದ್ದ ತಮಗಿಂತ ಕಾಣೆಯಾದ ಅವನೇ ಹೆಚ್ಚು ಮುದ್ದಿನವನಾಗಿದ್ದನೋ ಎಂದು ಅನ್ನಿಸಿದ್ದುಂಟಾದರೂ ಅಪ್ಪನ ವರ್ತನೆಯ ನಿಜವಾದ ಅರ್ಥವನ್ನು ಗ್ರಹಿಸಲಾರದವರಲ್ಲ. ಆದರೂ ಎಲ್ಲೂ ಕೇಳಿ ಗೊತ್ತಿರದ ಅವರ ಈ ವರ್ತನೆಯಿಂದ ಜನರಲ್ಲಿ ತಮ್ಮ ಬಗೆಗೇ ತಪ್ಪು ಕಲ್ಪನೆಯಾಗತೊಡಗಿದಾಗ ನೊಂದುಕೊಂಡದ್ದೂ ಉಂಟು. ಮಕ್ಕಳಿಗಿಂತ ಹೆಚ್ಚಾಗಿ ಸೊಸೆಯಂದಿರು. ಹೆತ್ತ ತಾಯಿಯೇ ಈ ದುರ್ಘಟನೆಯನ್ನು ಇಷ್ಟೊಂದು ಅವಾಸ್ತವ ರೀತಿಯಲ್ಲಿ ಮನಸ್ಸಿಗೆ ಹಚ್ಚಿಕೊಂಡಹಾಗಿಲ್ಲ. ಹೊಸ ಮಕ್ಕಳು ಹುಟ್ಟಿ ಬೆಳೆಯುತ್ತಿದ್ದ ಹಾಗೆ ಹಿಂದಿನದನ್ನು ಮರೆಯುತ್ತ ಬಂದಿರಬೇಕು. ಆದರೆ ಮುದುಕನಿಗೋ ಒಬ್ಬನದೇ ಧ್ಯಾನ! ವೃತ್ತಿಯಿಂದ ಅವರು ದಾಣೇವಾಲಾ. ಅವನದು ಚಿಕ್ಕ ಕಿರಾಣಿ ಅಂಗಡಿಯಿತ್ತಂತೆ; ವ್ಯಾಪಾರ ಹೆಚ್ಚುತ್ತ, ಮನೆ ಮತ್ತೆ ಮಕ್ಕಳಿಂದ ತುಂಬಿಕೊಳ್ಳುತ್ತ ಸುಖದ ದಿನಗಳು ನೆಲಸಹತ್ತಿದ ಹಾಗೆ ಈ ಸುಖಕ್ಕೆ ಭಾಗಿಯಾಗಬೇಕಿದ್ದ ಆ ಇನ್ನೊಬ್ಬಾತ ಇದೇ ಹೊತ್ತಿಗೆ ಎಂಥ ದರಿದ್ರ ಸ್ಥಿತಿಯಲ್ಲಿ ದಿನಗಳೆಯುತ್ತಿದ್ದಾನೋ ಎನ್ನುವಂಥ ಕೊರಗೂ ಹೆಚ್ಚುತ್ತ ಹೋಯಿತು. ಝೋಪಡ ಪಟ್ಟಿಯಲ್ಲಿ ವಾಸಿಸುತ್ತಿರಬಹುದೆ? ಭಿಕ್ಷೆ ಬೇಡಿ ಜೀವಿಸುತ್ತಿರಬಹುದೆ? ರಾವ್‌ಜೀಭಾಯಿ ಅಂಗಡಿಗೆ ಬರುವ, ಅಂಗಡಿಯಿಂದ ಹಾದುಹೋಗುವ ಬಡ ಮಕ್ಕಳಲ್ಲೆಲ್ಲ – ಈಗ ಅವನು ಐದು ವರ್ಷದವನು, ಎಂಟು ವರ್ಷದವನು ಎಂದು ಮುಂತಾಗಿ ಮನಸ್ಸಿನಲ್ಲೇ ಬೆಳೆಯುತ್ತ ಹೋದ ಹುಡುಗನ ವಯಸ್ಸಿಗೆ ಸರಿ ಹೋಗುವ ಹುಡುಗರಲ್ಲೆಲ್ಲ ಕಾಣೆಯಾದ ಮಗನನ್ನು ಹುಡುಕುತ್ತಿದ್ದ ರಾವ್‌ಜೀಭಾಯಿಯ ವರ್ತನೆ ಒಮ್ಮೆ ಮಾತ್ರ ವಿಕೋಪಕ್ಕೆ ಹೋಗಿ ದೊಡ್ಡ ಗಲಭೆಗೆ ಕಾರಣವಾಯಿತು. ಅದು ಅವನ ಆ ಮಗ ಸಾಧಾರಣ ಹತ್ತು ವರ್ಷದವನಾಗಿರಬೇಕಾದ ಕಾಲದಲ್ಲಿ. ಇವರ ಸಾಂತಾಕ್ರೂಝ್ ಮನೆಗೆ ದೊಡ್ಡ ಕಾಂಪೌಂಡು ಇದೆಯಂತೆ. ಅಂಗಡಿಗೆ ರಜೆಯಿದ್ದ ಒಂದು ದಿನ ಬೆಳಿಗ್ಗೆ ರಾವ್‌ಜೀಭಾಯಿ ಹಳೆಯ ಕಾಲದ ಮನೆಯ ಹರವಾದ ಜಗಲಿಯ ಮೇಲೆ ಮಕ್ಕಳೊಂದಿಗೆ ಆಡುತ್ತಿರುವಾಗ ಡೊಂಬರಾಟದವರು ಕಾಂಪೌಂಡಿನ ಒಳಕ್ಕೆ ಬಂದರು; ಗಂಡ–ಹೆಂಡತಿ, ಹತ್ತು ವರ್ಷದ ಹುಡುಗನೊಬ್ಬ ಹಾಗೂ ಮೂರು ವರ್ಷದ ಹುಡುಗಿಯೊಬ್ಬಳು. ಆಟವಾಡಲು ರಾವ್‌ಜೀಭಾಯಿಯ ಪರವಾನಗಿ ದೊರಕಿದ ನಂತರ